ಕರ್ನಾಟಕ ಸರ್ಕಾರ

# ತಹಶೀಲ್ದಾರರ ನ್ಯಾಯಾಲಯ ಹೂವಿನಹಡಗಲಿ

ಸಂ.ಕಂ/ಪಹಣಿ/ವಿವಾದ/93/2014–15 ದಿನಾಂಕ: 26–05–2016

ಉಪಸ್ಥಿತರು : ಹೆಚ್.ವಿಶ್ವನಾಥ, ತಹಶೀಲ್ದಾರರು,

| ವಾದಿಗಳು | ಪ್ರತಿವಾದಿಗಳು/ಎದುರುದಾರರು |
|---|---|
| **ಶ್ರೀ.1)ಕೊಟ್ರಯ್ಯ ತಂದೆ ಲೇಟ್ ಪಂಚಾಕ್ಷರಯ್ಯ<br>2)ಗಂಗಮ್ಮ ಗಂಡ ಲೇಟ್ ನಾಗೇಂದ್ರಯ್ಯ<br>3)ಸಾವಿತ್ರಮ್ಮ ಗಂಡ ಲೇಟ್ ಕೊಟ್ರಯ್ಯ<br>4)ಶೇಖರಯ್ಯ ತಂದೆ ಲೇಟ್ ಪರಮೇಶ್ವರಯ್ಯ<br>5)ಜಗದೀಶಯ್ಯ ತಂದೆ ಲೇಟ್ ಪರಮೇಶ್ವರಯ್ಯ<br>ಮಹಾಜನದಳ್ಳಿ** | **ಕಂದಾಯ ನೀರೀಕ್ಷಕರು ಇಟ್ಟಗಿ** |

**ದಾವಾ ಜಮೀನಿನ ವಿವರ**

| ಗ್ರಾಮ | ಸರ್ವೇ ನಂಬರ್ | ವಿಸ್ತೀರ್ಣ (ಎಕರೆ.ಸೆಂಟ್ಸ್) |
|---|---|---|
| **ಮಹಾಜನದಳ್ಳಿ** | **489/ಡಿ** | **4.64** |

**ಪ್ರಸ್ತಾವನೆ :**

ಮೇಲಿನ ದಾವಾ ಜಮೀನಿಗೆ ಸಂಬಂದಿಸಿದಂತೆ ವಂಶವೃಕ್ಷ ಹಾಗು ಅಫಿಡವಿಟ್ ಹೇಳಿಕೆಯನ್ನು ಲಗತ್ತಿಸಿ 1ನೇ ವಾದಿಯು ದಿನಾಂಕ 16/12/2014 ರಂದು ಅರ್ಜಿ ಸಲ್ಲಿಸಿ ಶ್ರೀ ಪರಮೇಶ್ವರಯ್ಯ ಮೂಲ ಪಟ್ಟಾದಾರರು ಇವರು ಮರಣಹೊಂದಿದ ಮೇರೆಗೆ ಪೋತಿ ವಾರಸಾ ಪ್ರಕಾರ ತಮ್ಮ ಹಾಗು ತಮ್ಮ ಸೋದರರ ಹೆಸರಿಗೆ ಪಟ್ಟಾ ಬದಲಾವಣೆ ಮಾಡಲು ಅರ್ಜಿ ಸಲ್ಲಿಸಿರುತ್ತಾರೆ.ಈ ಮೇರೆಗೆ ಎಂ ಆರ್ ಸಂಖ್ಯೆ ಹೆಚ್34/2014–15 ರಲ್ಲಿ ಪ್ರಕರಣ ದಾಖಲಿಸಿಕೊಂಡು ನಮೂನೆ 21 ನೋಟೀಸನ್ನು ಜಾರಿ ಮಾಡಿ ಪ್ರಚುರಪಡಿಸಿರುತ್ತದೆ.ನೋಟೀಸು ಪ್ರಚುರಪಡಿಸಿದ ನಿಗದಿತ ಅವದಿಯೊಳಗೆ ಯಾವುದೇ ತಕರಾರು ಬಂದಿರುವುದಿಲ್ಲ ಆದರೆ 3 ರಿಂದ 5 ರ ವಾದಿಗಳು ಮಿಕ್ಕ 1 ಮತ್ತು 2 ರ ಅನಧಿಕೃತ ವ್ಯಕ್ತಿಗಳ ಹೆಸರುಗಳನ್ನು ಸೇರಿಸಿದ ಬಗ್ಗೆ ತಕರಾರು ವ್ಯಕ್ತಪಡಿಸಿ ನಮೂನೆ 21 ನೋಟೀಸನ್ನು ಸ್ವೀಕರಿಸಲು ನಿರಾಕರಿಸುತ್ತಾರೆ.

ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ, ಕರ್ನಾಟಕ ಭೂಕಂದಾಯ ಕಾಯ್ದೆ 1964 ಕಲಂ 129ರ ಅನ್ವಯ ನೈಸರ್ಗಿಕ ನ್ಯಾಯ ದೃಷ್ಟಿಯಿಂದ ವಾದಿ ಮತ್ತು ಪ್ರತಿವಾದಿಗಳಿಗೆ ಹಾಗೂ ಅವರ ಪರ ನ್ಯಾಯಾವಾದಿಗಳ ರವಗೂ ಕೇಳಿಕೊಳ್ಳಲು ಅವಕಾಶ ನೀಡಿ, ದಿನಾಂಕ 12/03/2015 ರಂದು ವಿಚಾರಣೆಗೆ ಹಾಜರಾಗಲು ನೋಟೀಸು ನೀಡಿ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಲಾಯಿತು.ದಿನಾಂಕ 16/07/2015 ರಂದು ವಿಚಾರಣೆ ಅಂತಿಮಗೊಳಿಸಲಾಯಿತು. ವಿಚಾರಣೆಗೆ ವಾದಿ ಸಂಖ್ಯೆ 4 ಮತ್ತು 5 ಗಳು ಮಾತ್ರ ಹಾಜರಾಗಿದ್ದು ಮಿಕ್ಕವರು ಗೈರು ಹಾಜರಾಗಿರುತ್ತಾರೆ.ಈ ಇಬ್ಬರು ತಮ್ಮ ಅಫಡವಿಟ್ ಹೇಳಿಕೆಗಳನ್ನು ನೀಡಿ ಪಾಲು ವಿಭಾಗದ ಪ್ರಕಾರ ಶ್ರೀಮತಿ ಸಾವಿತ್ರಮ್ಮ ಗಂಡ ಕೊಟ್ರಯ್ಯ ಮತ್ತು ತಮ್ಮಗಳ ಹೆಸರಿಗೆ ಪಟ್ಟಾ ಬದಲಾವಣೆ ಮಾಡಲು ಕೋರಿರುತ್ತಾರೆ.ದಾಖಲೆಗಳನ್ನು ಪರಿಶೀಲಿಸಲಾಗಿ 1ನೇ ವಾದಿಯಾದ ಶ್ರೀ ಕೊಟ್ರಯ್ಯ ತಂದೆ ಪಂಚಾಕ್ಷರಯ್ಯ ಇವರು ಪೌತಿ ಪಟ್ಟಾ ಬದಲಾವಣೆಗೆ ಅರ್ಜಿ ಸಲ್ಲಿಸಿದ್ದು ಎಲ್ಲಾ ವಾದಿಗಳ ಹೆಸರಿನಲ್ಲಿ ಜಂಟಿ ಪಟ್ಟಾ ಮಾಡಲು ಕೋರಿರುತ್ತಾರೆ.ಆದರೆ 4 ಮತ್ತು 5 ನೇ ವಾದಿಗಳು ಹೊರತುಪಡಿಸಿ ಮಿಕ್ಕವರು ವಿಚಾರಣೆಗೆ ಹಾಜರಾಗಿರುವುದಿಲ್ಲ ವಂಶವೃಕ್ಷ ಪರಶೀಲಿಸಲಾಗಿ ಮೂಲ ಪಟ್ಟಾದಾರರಾದ ಶ್ರೀ ಪರಮೇಶ್ವರಯ್ಯ ಇವರಿಗೆ 3 ರಿಂದ 5ನೇ ವಾದಿಗಳು ಮಾತ್ರ ವಾರಸುದಾರರೆಂದು ಕಂಡುಬರುತ್ತಿದ್ದು,ಇವರುಗಳು ತಮ್ಮ ಅಫಿಡವಿಟ್ ಹೇಳಿಕೆಯಲ್ಲಿ ನೀಡಿದಂತೆ ತಮ್ಮ ಕುಟುಂಬದ ಪಾಲುವಿಭಾಗದ ದಸ್ತಾವೇಜನ್ನು ಪರಿಶೀಲನೆಗೆ ಸಲ್ಲಿಸದೆ ಇರುವ ಕಾರಣ ಈ ಪ್ರಕರಣದಲ್ಲಿ ಉದ್ಭವಿಸಿದ ವಿವಾದವನ್ನು ಬಗೆಹರಿಸಲು ಹಲವಾರು ಗೊಂದಲಗಳು ಇರುವುದರಿಂದ ಈ ಕೆಳಕಂಡ

## ಆದೇಶ

ಪ್ರಕರಣದ ಹಿನ್ನೆಲೆ, ವಾಸ್ತವಾಂಶ ಹಾಗು ದಾಖಲೆಗಳನ್ವಯ ವಾದಿಗಳು ನೀಡಿದ ಹೇಳಿಕೆ ಮೇರೆಗೆ ಸೂಕ್ತ ದಾಖಲೆಗಳನ್ನು ಸಲ್ಲಿಸದೇ ಇರುವ ಕಾರಣ ಪ್ರಕರಣವನ್ನು ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಲು ಆದೇಶಿಸಿದೆ.

| ಗ್ರಾಮ | ಸರ್ವೇ ನಂಬರ್ | ವಿಸ್ತೀರ್ಣ (ಎಕರೆ.ಸೆಂಟ್ಸ್) |
|---|---|---|
| **ಮಹಾಜನದಳ್ಳಿ** | **489/ಡಿ** | **4.64** |

ಈ ಆದೇಶವನ್ನು ಬೆರಳಚ್ಚುಮಾಡಿಸಿ, ದಿನಾಂಕ 26–05–2016ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು
ಹಡಗಲಿ.

ಪ್ರತಿಗಳನ್ನು :
1) ವಾದಿ ಮತ್ತು ಪ್ರತಿವಾದಿಗಳಿಗೆ ಹಾಗೂ ಅವರ ಪರ ನ್ಯಾಯವಾದಿಗಳಿಗೆ.
2) ಭೂಮಿ ಕೇಂದ್ರಕ್ಕೆ ಸೂಕ್ತ ಕ್ರಮಕ್ಕಾಗಿ.